**ಅಸಲು ದಾವಾ ಸಂಖ್ಯೆ: 451/2009**

**ಸಿಡಬ್ಲ್ಯೂ-1**

## ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಬೆಳಗಾವಿ

| | |
|---|---|
| **ಹೆಸರುಃ** | **ಶ್ರೀ ಮಂಜುನಾಥ ಮುಳ್ಳೂರ** |
| **ತಂದೆ ಹೆಸರುಃ** | **ನಿಂಗಪ್ಪಾ** |
| **ವಯಸ್ಸುಃ** | **41 ವರ್ಷ** |
| **ಉದ್ಯೋಗಃ** | **ಸರ್ವೆಯರ್, ಎಡಿಎಲ್ಆರ್ ಕಛೇರಿ, ಬೆಳಗಾವಿ.** |
| **ವಿಳಾಸಃ** | **ಚವಾಟಗಲ್ಲಿ, ಬೆಳಗಾವಿ.** |

**ದಿನಾಂಕ 03.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ -**

ನಾನು ಈ ಪ್ರಕರಣದಲ್ಲಿ ಕಮಿಷನ ವಾರಂಟನ್ನು ಪಡೆದುಕೊಂಡು ಸಂಬಂಧಿತ ಪಕ್ಷಗಾರರಿಗೆ ನೋಟಿಸನ್ನು ನೀಡಿ ದಿನಾಂಕ 09.12.2021 ರಂದು ಕಮಿಷನ ಕೆಲಸಕ್ಕಾಗಿ ಬರುವುದಾಗಿ ತಿಳಿಸಿರುತ್ತೇನೆ. ನಂತರ ದಿನಾಂಕ 09.12.2021 ರಂದು ದಾವಾ ಆಸ್ತಿ ಇರುವ ಸ್ಥಳಕ್ಕೆ ಹೋಗಿ ದಾವಾ ಆಸ್ತಿಯನ್ನು ಹಾಜರಿದ್ದ ಪಕ್ಷಗಾರರ ಸಮಕ್ಷಮ ಅಳತೆ ಮಾಡಿ ಅದರಂತೆ ನಕಾಶೆ ಹಾಗೂ ಕಮಿಷನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ಕಮಿಷನ ನಕಾಶೆಯಾಗಿದ್ದು ಅದನ್ನು ನಿಶಾನೆ ಸಿ 1 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ಪಕ್ಷಗಾರರಿಗೆ ನೀಡಿದ ನೋಟಿಸ ಆಗಿದ್ದು ಅದನ್ನು ನಿಶಾನೆ ಸಿ 2 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆಗಳು 9 ಅಂಚೆ ರಶೀದಿ ಹಾಗೂ 9 ಎಡಿ ಕಾರ್ಡಗಳಾಗಿದ್ದು ಅವುಗಳನ್ನು ನಿಶಾನೆ ಸಿ 3 ರಿಂದ 21 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ವಾದಿ ಮತ್ತು ಪ್ರತಿವಾದಿ ನೀಡಿರುವ ಜವಾಬ ಆಗಿರುತ್ತದೆ ಅದನ್ನು ನಿಶಾನೆ ಸಿ 22 ಎಂದು ಗುರುತಿಸಲಾಯಿತು. ನ್ಯಾಯಾಲಯದ ಆದೇಶ ಪ್ರಕಾರ ಕಮಿಷನ ನಕಾಶೆ ಹಾಗೂ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ ಸರಿಯಿದೆ.

ಸಹಿ/-

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,

ಬೆಳಗಾವಿ.